ಕಾವ್ಯ ನನಗೆ ನನ್ನ ವೈಯಕ್ತಿಕ, ಸಾಮಾಜಿಕ ಹಾಗೂ ದಿನನಿತ್ಯದ ಭಾವನೆಗಳನ್ನು, ಆಲೋಚನೆಗಳನ್ನು, ನಿಲುವುಗಳನ್ನು ಖಚಿತ ಪಡಿಸುವ ಮಾಧ್ಯಮ. ಕಾವ್ಯ ಕ್ಷಣಿಕ ಮತ್ತು ಅನಂತ ಕ್ಷಣಗಳನ್ನು ಸೆರೆಹಿಡಿಯುವುದರ ಜೊತೆಗೆ ವ್ಯಾಖ್ಯಾನಕ್ಕೆ ಮುಕ್ತವಾಗಿರಬೇಕು. ನಾನು ಈ ಅವಸರದ ಬದುಕಿನಲ್ಲಿ ಅನಿಶ್ಚಿತವಾದ ಆದರೆ ಮಾತುಗಳ ಮರೆಯಲ್ಲಿ ಅವಿತ ಮೂಕ ಸೌಂದರ್ಯವನ್ನು ಹುಡುಕುತ್ತೇನೆ. ನನ್ನ ಸುತ್ತಲಿನ ಜಗತ್ತಿನಿಂದ ರೂಪ ತಳೆಯುವ ಅರ್ಥವನ್ನಷ್ಟೇ ಅಲ್ಲ, ಅಮೂರ್ತ ಅನುಭವಗಳನ್ನು ಹುಡುಕಿ ಹೊರತೆಗೆಯಲು ನಾನು ಕಂಡುಕೊಂಡ ಅಡ್ಡದಾರಿ ಕಾವ್ಯ ಅನ್ನಬಹುದು. ಮತ್ತಿದು ನನ್ನ ಆಂತರಿಕ ಆಲೋಚನೆಗಳು ಮತ್ತು ಬಾಹ್ಯ ಪ್ರಪಂಚದ ನಡುವೆ ಸೇತುವೆಯಾಗಿ ಕಾರ್ಯನಿರ್ವಹಿಸುತ್ತದೆ.

ಕಾವ್ಯ ನನ್ನ ಪ್ರಾಮಾಣಿಕ ಅಭಿವ್ಯಕ್ತಿ. ಆದರೆ ಕಾವ್ಯವೇ ಯಾಕೆ ನನ್ನ ಆಯ್ಕೆ ಅನ್ನೋದು ಯೋಚಿಸಬೇಕಾದ ವಿಷಯ. ಹಾಗೆ ನೋಡಿದರೆ ಕಾದಂಬರಿಗಳೆಂದರೆ ನನಗೆ ಇಷ್ಟ. ಆದರೆ ನಾನು ಬರೆಯೋದು ಕಾವ್ಯ. ಒಂದು ಲೆಕ್ಕದಲ್ಲಿ ಕಾವ್ಯ ಮಾತಿನ ವಿವರಣೆಗೆ ನಿಲುಕದ ಭಾವನೆಗೆ ಮಾತ್ರ ದಕ್ಕುವ ರೂಢಿಗತವಲ್ಲದ ಸತ್ಯಗಳನ್ನು ನುಡಿಯಲು ಮತ್ತು ಅರಿಯಲು ಅವಕಾಶ ಮಾಡಿಕೊಡುತ್ತದೆ ಅಂತ ನನಗನ್ನಿಸುತ್ತೆ. ತಾನು ಬಾಳಿ ಬದುಕಿದ್ದಕ್ಕೆ ಸಾಕ್ಷಿ ಒದಗಿಸಬೇಕೆಂಬ, ಮನುಷ್ಯನ ಅಭಿವ್ಯಕ್ತಿಯ ಹಂಬಲವೇ ಎಲ್ಲಾ ಬಗೆಯ ಕಲೆ ಸಾಹಿತ್ಯದ ಉಗಮಕ್ಕೆ ಕಾರಣವಾಗುತ್ತದೇನೋ ಗೊತ್ತಿಲ್ಲ.

**◆ ಇಂಡೋನೇಷಿಯಾದ ಹೊಸ ತಲೆಮಾರಿನ ಕಾವ್ಯದ ವಸ್ತು - ವಿಷಯ, ನಿರೂಪಣಾ ಕ್ರಮ ಹಾಗೂ ಆಶೋತ್ತರಗಳೇನು?**

ಹೊಸ ತಲೆಮಾರಿನ ಹಲವರು ನಮ್ಮ Cultural heritage ಜೊತೆ ತೊಡಗಿಸಿಕೊಂಡೇ ಹಳೆಯ ಮಾದರಿಗಳನ್ನು ಮುರಿದು ಕಟ್ಟುವ ಪ್ರಯತ್ನ ನಡೆಸಿದ್ದಾರೆ. ಆಧುನಿಕತೆ ಹಾಗೂ ಸಂಪ್ರದಾಯಗಳ ನಡುವಿನ ಬಿಕ್ಕಟ್ಟುಗಳ ಬಗ್ಗೆ ನಮ್ಮ ತಲೆಮಾರಿನ ಕಾವ್ಯ ಹೆಚ್ಚು ತಲೆ ಕೆಡಿಸಿಕೊಂಡಂತಿದೆ. ಲಿಂಗ ಸಮಾನತೆ ಮತ್ತು ಪರಿಸರ ಪ್ರಜ್ಞೆಗೆ ಸಂಬಂಧಿಸಿದ ಜಡ ನಿರೂಪಣೆಗಳಿಗೆ ಸವಾಲೆಸೆಯುವ ಚಳವಳಿಯೇ ನಡೆಯುತ್ತಿದೆ. ಈ ತಲೆಮಾರಿನ ಕವಿಗಳು ಸಾಹಿತ್ಯದ formal structureನ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ತಮ್ಮ ಭಾವನೆಗಳನ್ನು ಮತ್ತು ವಿಚಾರಗಳನ್ನು ಮುಕ್ತವಾಗಿ ಅಭಿವ್ಯಕ್ತಿಸುತ್ತಿದ್ದಾರೆ.

ಸರ್ರಿಯಲ್ ಇಮೇಜ್‌ಗಳ ಜೊತೆಗೆ ಸಾಮಾಜಿಕ ವಿಮರ್ಶೆಯನ್ನು ಹೆಣೆಯುವ ಆಫ್ರಿಝಾಲ್ ಮಲ್ನಾ, ವೈಯಕ್ತಿಕ ಟ್ರಾಮ ಮತ್ತು ಐತಿಹಾಸಿಕ ನೆನಪುಗಳಲ್ಲಿ ಮುಳುಗೇಳುವಂತೆ ಪದ್ಯಗಳನ್ನು ಬರೆಯುವ ಸಿಂತಾ ಯುದೊನೊ, ಸಮಕಾಲೀನ ಇಂಡೋನೇಷಿಯಾದ ಮುಂಚೂಣಿಯ ಕವಿಗಳು. ಎಡಿ ಸಮುದ್ರ ಕರ್ತಗಾಮ, ರಾಮ ದೋನಿ ಮತ್ತು ಅರಿ ಪಹಲ ಹುತಭಾರತ್ ಇವರೆಲ್ಲಾ ಸಾಮಾನ್ಯ ಕವಿಗಳಲ್ಲ, ಇಂಡೋನೇಷಿಯಾದಲ್ಲಿ ಕವಿ ಮತ್ತು ಕವಿತೆಯ ಅರ್ಥಕ್ಕೆ ಮರು ವ್ಯಾಖ್ಯಾನ ಕೊಡುತ್ತಿದ್ದಾರೆ. ಹಿಂದಿನದನ್ನು ಒಪ್ಪಿಕೊಳ್ಳುತ್ತಲೇ ಹೊಸ ದೃಷ್ಟಿಕೋನವನ್ನು ಬೆಳೆಸುತ್ತಿದ್ದಾರೆ.

**◆ ನಿಮ್ಮದು ಬಹುತೇಕ ಬುಡಕಟ್ಟುಗಳ ಸಮುದಾಯ. ಇಸ್ಲಾಂ ಬಂದ ಮೇಲೆ ಅಲ್ಲಿ ಸಾಂಸ್ಕೃತಿಕವಾಗಿ ಏನೆಲ್ಲಾ ಬದಲಾಯಿತು?**

ಇಸ್ಲಾಂ ಮೂಲತಃ ಬುಡಕಟ್ಟು ಸಂಸ್ಕೃತಿಯಿಂದಲೇ ಉದಯಿಸಿದ ಧರ್ಮ ಎಂಬುದನ್ನು ಮರೆಯಬೇಡಿ.

ಇಸ್ಲಾಂ ನಮ್ಮಲ್ಲಿ ಒಂದು ಹೊಸ ವಿಚಾರವಾಗಿ ಮೂಡಿ ಬಂತೇ ವಿನಹಾ ಕಟ್ಟುನಿಟ್ಟಿನ ಆಚಾರವಾಗಿ ಅಲ್ಲ ಎನ್ನಬಹುದು. ಹೀಗಾಗಿ ಶತಮಾನಗಳಿಂದ ಅಸ್ತಿತ್ವದಲ್ಲಿರುವ ಸ್ಥಳೀಯ ಬುಡಕಟ್ಟು ಮೌಲ್ಯಗಳ ಜೊತೆಗೆ ಇಸ್ಲಾಮಿನ ಅಫಿಶಿಯಲ್ ಮೌಲ್ಯಗಳು ಸಹಜವಾಗಿ ಬೆರೆತುಕೊಂಡಿವೆ. ಸ್ಥಳೀಯ ಪದ್ಧತಿಗಳನ್ನು ಇಸ್ಲಾಮಿಕ್ ಆಚರಣೆಗಳೊಂದಿಗೆ ಸೃಜನಶೀಲವಾಗಿ ಮರಿದು ಕಟ್ಟಿರುವುದರಿಂದ ಸಾಂಸ್ಕೃತಿಕ ಬದಲಾವಣೆಗಳಲ್ಲಿ ಸಮನ್ವಯತೆ ಸಾಧ್ಯವಾಗಿದೆ.

ಉದಾಹರಣೆಗೆ ಲಾಂಪುಂಗ್ ಸಂಸ್ಕೃತಿಯಲ್ಲಿ ಸೆಲಾಮಟಾನ್ ಎಂಬ ಸಾಮೂಹಿಕ ಭೋಜನದ ಆಚರಣೆಯು ಮೊದಲಿನಿಂದಲೂ ಇದೆ. ಇದು ಇಸ್ಲಾಮಿಕ್ ಮತ್ತು ಇಸ್ಲಾಮಿಕ್ ಪೂರ್ವ ಎರಡರ ಸಾರಗಳನ್ನೂ ಒಳಗೊಂಡಿದೆ. ಮತ್ತಿದು ಪೂರ್ವಜರನ್ನು ಗೌರವಿಸಲು ಜಾವಾ ಬುಡಕಟ್ಟಿನ ಅರ್ಪಣೆಗಳೊಂದಿಗೆ ಇಸ್ಲಾಮಿಕ್ ಪ್ರಾರ್ಥನೆಗಳನ್ನು ಬೆಸೆಯುತ್ತದೆ. ಇನ್ನು 'ಬ್ರದರ್ ಹುಡ್' ಪರಿಕಲ್ಪನೆಯನ್ನು ಎತ್ತಿ ಹಿಡಿಯುವ